# ಮಾನವೀಯತೆಯ ಮಾತು: ಕುರಿತೊಂದು ಮಂಥನ.

**ಡಾ. ಅನ್ನಪೂರ್ಣ ಹೆಚ್.**
ಮುಖ್ಯ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ
ಕಾನಲೆ, ತಾ. ಸಾಗರ,
ಜಿ. ಶಿವಮೊಗ್ಗ.

**Article Link: https://aksharasurya.com/2023/09/annapoorna-h/**

## ABSTRACT:

"ಮಾನವೀಯತೆಯ ಮಾತು" ಶಿಕ್ಷಕ ಕವಿಯೊಬ್ಬರ ಕಲ್ಪನೆ, ಆಲೋಚನೆ, ಅನುಭವಗಳು ಮುಪ್ಪುರಿಗೊಂಡ ಕವನ ಸಂಕಲನವಾಗಿದೆ. ಕವಿ ಫಾಲಾಕ್ಷಪ್ಪ ಎಸ್. ಎನ್. ರವರ ಚೊಚ್ಚಲ ಸಂಕಲನವಾಗಿದ್ದರೂ ವಿಷಯ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿರುತ್ತದೆ. ಈ ಕವಿಗೆ ಸೃಷ್ಟಿಯ ಅದ್ಭುತಗಳಂತೆಯೇ ಮಾನವ ಸೃಷ್ಟಿಯ ಅಪಸವ್ಯಗಳೂ ಕಾಡಿವೆ. ಹಕ್ಕಿ, ಚುಕ್ಕಿ, ಪ್ರೀತಿ, ಮೋಡ, ಮಳೆ, ಗಿಡ, ಮರಗಳು ಕಾವ್ಯದಲ್ಲಿ ಜಾಗ ಪಡೆದಿವೆ. ಪ್ರಕೃತಿಯ ವ್ಯಾಪಾರಗಳನ್ನು ಹೇಳುತ್ತಲೇ ಅದರ ಸಂದೇಶಗಳನ್ನು ನಿಜ ಜೀವನಕ್ಕೆ ಸಂಬಂಧಕಲ್ಪಿಸುತ್ತಾ ಹೋಗಿದ್ದಾರೆ.

ಮನುಷ್ಯ ಸಂಬಂಧಗಳ ಬಗ್ಗೆ ಅತೀವ ಆಸ್ಥೆ ಈ ಕವಿಗಿದೆ. ಅಮ್ಮ, ಅಪ್ಪ, ಮಡದಿ, ಮಗಳು, ಮಗ, ಸೋದರ ಹೀಗೆ ಯಾವ ಸಂಬಂಧವೂ ಇವರ ಲೇಖನಿಯಿಂದ ತಪ್ಪಿಸಿಕೊಂಡಿಲ್ಲ. ಇಲ್ಲೆಲ್ಲಾ ಕವಿಯ ಜೀವನಪ್ರೀತಿ ಎದ್ದು ಕಾಣುತ್ತದೆ.

ಸಮಾಜದಲ್ಲಿನ ಮೂಢನಂಬಿಕೆಗಳು, ಜೀವ ವಿರೋಧಿ ಸಂಗತಿಗಳ ಬಗ್ಗೆಯೂ ಕವಿ ಧ್ವನಿ ಎತ್ತಿದ್ದಾರೆ. ವಸ್ತ್ರಗಳೆ ಅಸ್ತ್ರವಾಗಿರುವ ಕಾಲದ ವ್ಯಂಗವನ್ನೂ ಕವಿತೆಯಲ್ಲಿ ಹರಿಯಬಿಟ್ಟಿದ್ದಾರೆ. 'ಹೆಣ್ಣು' ಎಂಬ ಜೀವಶಕ್ತಿಯನ್ನು ಅಗ್ನಿಕುಂಡದಲ್ಲಿ ಬೀಳಿಸೇಳಿಸುವ ಜೀವ ವಿರೋಧಿ ಸಂಗತಿಗಳನ್ನು ವ್ಯಾಕುಲತೆಯಿಂದಲೆ ದಾಖಲಿಸಿದ್ದಾರೆ. ಆಷಾಢಭೂತಿತನ, ನಾಸ್ತಿಕರೆಂದು ಹೇಳುವವರ ನಾಟಕೀಯತೆಯೂ ಆಸ್ತಿಕರೆನ್ನುವವರ ಅತಿರೇಕವನ್ನೂ ವ್ಯಂಗ್ಯನೋಟದಲ್ಲಿ ಕಾಣಲಾಗಿದೆ.

'ಶ್ರಮಸಂಸ್ಕೃತಿ'ಯ ಬಗ್ಗೆ ಕವಿಗೆ ಆದರವಿದೆ. ಹಾಗಾಗಿಯೆ ಶ್ರಮವನ್ನು ಕಾವ್ಯದಲ್ಲಿ ಕಡೆಯುವಾಗ ಕವಿಯ ಕಟ್ಟುವಿಕೆ ಪ್ರತಿಮೆ, ಧ್ವನಿಗಳಿಂದ ಅನುರಣನಗೊಳ್ಳುತ್ತದೆ. ಈ ಕುರಿತು ಪ್ರಸ್ತುತ ಲೇಖನದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ನಿತ್ಯ ಜೀವನದ ಹಸಿ ಹಸಿ ಉದಾಹರಣೆಗಳನ್ನೆ ಪ್ರತಿಮೆಯಾಗಿ, ಅಲಂಕಾರವಾಗಿ ಬಳಸಿರುವುದೂ ಕೂಡ ಈ ಕವಿಯ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ.

ಇದು ಒಂದು ಪುಸ್ತಕವನ್ನು ಅವಲೋಕಿಸುವ ಲೇಖನವಾಗಿದ್ದು ವಿಮರ್ಶೆಯ ಆಳಕ್ಕಿಳಿದಿರುವುದಿಲ್ಲ. ಆದರೆ ಕಾವ್ಯದಲ್ಲಿ ವಾಚ್ಯತೆಯ ಹೇರಳತೆಯನ್ನು

ದಾಖಲಿಸಲು ಮರೆಯುವುದಿಲ್ಲ.


## KEYWORDS:

ಮಾನವೀಯತೆ, ಪ್ರೀತಿ, ಶ್ರಮ ಸಂಸ್ಕೃತಿ, ಸಂಬಂಧಗಳು, ಹಕ್ಕಿ, ಹಣತೆ.


ಸೃಜನಶೀಲತೆಯೆಂದರೇನೆ ಚಲನಶೀಲತೆ. ಚಲನೆ ಜೀವಂತಿಕೆಯ ಸಂಕೇತ. ಹೀಗೆ ಜೀವಂತಿಕೆಯ ಚಲನೆಯನ್ನು ಕಾದುಕೊಳ್ಳುವ ಹಂಬಲ, ಮನಸ್ಸಿನ ತಲ್ಲಣ, ತವಕ, ತುಡಿತ ಮಿಡಿತಗಳೇ ಮಾನವೀಯತೆಯ ಮಾತು! ಇತ್ತೀಚೆಗೆ ಅಂತರಂಗ ಪ್ರಕಾಶನ ಸಾಗರ ಇವರಿಂದ ಪ್ರಕಾಶನಗೊಂಡ, ಶಿಕ್ಷಕ ಮಿತ್ರ ಪಾಲಾಕ್ಷಪ್ಪ ಎಸ್. ಎನ್. ಇವರ ಚೊಚ್ಚಲ ಕವನ ಸಂಕಲನವಿದು. 86 ಕವನಗಳನ್ನು ಒಳಗೊಂಡಿರುವ ಈ ಹೊತ್ತಿಗೆ ಅದರೊಳಗಿನ ವಿಷಯ ವೈವಿಧ್ಯತೆಯಿಂದಾಗಿ ಹೂಗುಚ್ಚದಂತೆ ಪೋಣಿಸಿಕೊಂಡಿದೆ. ಮೊದಲ ಓದಿಗೆ ಸಿಕ್ಕಿದ, ದಕ್ಕಿದ ಅನಿಸಿಕೆಗಳನ್ನು ದಾಖಲಿಸುವ ಪ್ರಯತ್ನ ಈ ಲೇಖನ.

'ಹಣತೆ'ಯನ್ನು ಹಚ್ಚುವ ಮೂಲಕ ಕವನಯಾನ ಪ್ರಾರಂಭವಾಗುತ್ತದೆ. ಮುನ್ನುಡಿಯಲ್ಲಿ ನಾ. ಡಿಸೋಜಾ ಅವರು ಪ್ರಸ್ತಾಪಿಸಿದಂತೆ "ಹಣತೆ ಬಗೆಗಿನ ರೂಢಿಗತ ನಂಬಿಕೆ ಬೆಳಗುವಿಕೆ. ಕವಿಗೆ ಬೆಳಗುವಿಕೆಯಲ್ಲಿನ ಆಸಕ್ತಿಗಿಂತ ತಯಾರಿಕೆಯ ಹಂತದ ಪರಿಶ್ರಮದ ಕುರಿತು ಕಾಳಜಿಯಿದೆ. ಹಾಗೆಯೇ ಉರಿಯುವ ಪ್ರತೀ ದೀಪಕ್ಕೂ ಆರುವ ಸತ್ಯದ ಅರಿವಿರಬೇಕು."

**ತನ್ನ ತೈಲ ತೀರುವ ಮುನ್ನ**
**ತಾನು ಆರುವ ಅರಿವಿರಬೇಕು**
**ದೀಪ ನಂದುವ ಮುನ್ನ**
**ಮತ್ತೊಂದಕ್ಕೆ ದಿಕ್ಕಾಗಬೇಕು**

ಹೀಗೆ ಆರುವ ಅರಿವಿನ ಮೂಲಕ ಮೆರೆಯುವ ಪ್ರತಿಯೊಂದೂ ಮರೆಯಾಗುವ ಸಮಯವೊಂದಿರುವುದೆಂಬ ಎಚ್ಚರಿಕೆಯನ್ನೂ ನಂದುವ ಮುನ್ನ ಮತ್ತೊಂದಕ್ಕೆ ದಿಕ್ಕಾಗಬೇಕೆಂಬ ವ್ಯಕ್ತಿಯ ಜವಾಬ್ದಾರಿಯನ್ನೂ ನೆನಪಿಸುತ್ತದೆ. ಹೀಗೆ 'ದೀಪ' ಕವನದಲ್ಲಿಯೇ ಕವಿಗಿರುವ ಇತಿ ಮಿತಿಗಳ ಸ್ಪಷ್ಟತೆ ಅರಿವಿಗೆ ಬರುತ್ತದೆ.

ದುಡಿಯುವ ಮತ್ತು ದಮನಿತ ದನಿಗಳನ್ನು ಧ್ಯಾನಿಸುವಾಗ ಕವಿ ಬಳಸುವ ಪ್ರತಿಮೆಗಳು ಓದುಗರನ್ನು ಕಾಡುವಂತಿವೆ. 'ಚಪ್ಪಲಿಗಳು', 'ಹಳೆಯ ಹಾಳೆಗಳು', 'ಭಾವಚಿತ್ರಗಳು' ಮತ್ತು 'ಹಕ್ಕಿಗಳು' ಮುಂತಾದ ಸರಳವಾದ ಪ್ರತಿಮೆಗಳು ವಸ್ತುಸ್ಥಿತಿಯ ವಿವರಣೆಯಲ್ಲಿ ಗಂಭೀರ ಪಾತ್ರ ವಹಿಸಿದೆ.

**ಕುದಿನೀರ ಕಷ್ಟದಲಿ ಬೆಂದು,**
**ನೂರಾರು ಉಳಿಪೆಟ್ಟು ತಿಂದು!**
**ಮೈತುಂಬ ಹೊಲಿಗಾಯದ ಕಷ್ಟ,**
**ಹೆತ್ತೊಡಲ ಕರುಳ ಕಷ್ಟದಂತೆ!**

ಹೀಗೆ ಪ್ರಾರಂಭವಾಗಿ

**ನಮ್ಮನ್ನು ಕೊಂಡುತಂದ ದಿನ,**
**ಮನೆಯ ಒಳಗೆಲ್ಲ ಅವಕಾಶ!**
**ಆನಂತರ ಮನೆಯ ಹೊರಗೆ,**
**ಗುಡಿಕಟ್ಟಿದ ಗೌಂಡಿಯಂತೆ!!**

ಹೀಗೆ ಮುಂದುವರೆಯುತ್ತ 'ಚಪ್ಪಲಿಗಳು' ಎಂಬ ಶೀರ್ಷಿಕೆಯ ಈ ಕವನ ಬಳಸಿ ಬಿಸಾಡುವ ಸಂಸ್ಕೃತಿಯನ್ನು ವ್ಯಂಗ್ಯದ ಒರೆಗಲ್ಲಿಗೆ ಹಚ್ಚಿದೆ. ಇದೇ ಕವಿತೆಯಲ್ಲಿ "ಹೆತ್ತೊಡಲ ಕರುಳ ಕಷ್ಟದಂತೆ!", "ನಿತ್ಯ ಜೋಡೆತ್ತಿನಂತೆ" ಎಂಬ ನೈಜ ಉಪಮೆಗಳಿಂದ ಕವನ ಕಳೆಗಟ್ಟಿದೆ. "ಮೆಟ್ಟಿಸಿಕೊಳ್ಳಲೇ ಹುಟ್ಟಿದವರು!" ಎಂದು ಕೊನೆಯಾಗುವ ನಿರ್ಲಿಪ್ತ ದನಿ, ಕೆಳವರ್ಗದ ಅಸಾಯಕತೆಯನ್ನು ಮೌನದಲ್ಲಿ ವಿಲೀನಗೊಳಿಸಿದೆ. ಹೀಗೆಯೇ 'ಹಳೆಯ ಹಾಳೆಗಳು' ಕವನ ಕೂಡ ಅಲಕ್ಷಿತ ಸಂಬಂಧಗಳನ್ನು ನೆನಪಿಸಿಕೊಳ್ಳುತ್ತದೆ.

**ಬೇಸರದಿ ಹರಿದು ಬಿಟ್ಟೆ**
**ಮುದುರಿ ಎಸೆದು ಬಿಟ್ಟೆ**
**ಎತ್ತಿಡುವುದ ಮರೆತು ಬಿಟ್ಟೆ**
**ಈಗ ನಿಮ್ಮ ಹುಡುಕಾಟ!**

ಇಲ್ಲಿ ಪಶ್ಚಾತ್ತಾಪದ ಬೇಗುದಿಯಲ್ಲಿ ಕವಿಮನ ಒದ್ದಾಡುತ್ತಿದೆ. ಈ ಪಶ್ಚಾತ್ತಾಪ ಸಾಮಾಜಿಕ, ರಾಜಕೀಯ ಏಣಿ ಏರಿ ಕುಳಿತವರಿಗೂ ಇದ್ದುಬಿಟ್ಟರೆ ಎಷ್ಟು ಚೆಂದ! ಎನಿಸದಿರದು. 'ಭಾವಚಿತ್ರಗಳು' ಎಂಬ ಪ್ರತಿಮಾ ಕವನ ಮುಗ್ಧತೆಯ ದುರುಪಯೋಗವನ್ನು ಕಣ್ಣಿಗೆ ಕಟ್ಟಿದಂತೆ ಹೀಗೆ ವಿವರಿಸುತ್ತದೆ. ವಿಶೇಷತೆಯೆಂದರೆ,

**ಬೇಕಾದಾಗ ದೊಡ್ಡವರನ್ನಾಗಿಸಿ**
**ಬೇಡವಾದಾಗ ಚಿಕ್ಕವರನ್ನಾಗಿಸಿ**
**ಏರಿಸಿಳಿಸಿ ಹಾಕಿ ತೆಗೆದು ಬೀಳಿಸಿ**
**ಬಡಿದಾಡಿಕೊಳ್ಳುತ್ತಿರುವಿರಿ**
**ಎಲ್ಲರೊಂದಾಗಿ ಬದುಕಿ ಬಾಳಿ**
**ನಮ್ಮಂತೆ ಚಿತ್ರವಾಗುವ ಮುನ್ನ!!**

ಹೀಗೊಂದು ಬುದ್ಧಿಮಾತನ್ನೂ ಕವಿ ಹೇಳುತ್ತಿದ್ದಾರೆ. ಪ್ರಕೃತಿಯ ಕುರಿತು ಕವಿಮನಸುಗಳಿಗಿರುವ ಕುತೂಹಲ ಈ ಕವಿಯಲ್ಲೂ ಕಾಣುತ್ತದೆ. 'ಹಕ್ಕಿಗಳು', 'ಹಾಡು ಹಕ್ಕಿ', 'ಹೇ ವಸಂತ', 'ಗೀಜಗನ ಗೂಡು', 'ಬಾ ಮಳೆ', 'ಪ್ರೀತಿ ಮಳೆ'. ಹೀಗೆ ಸಾಲು ಸಾಲು ಉದಾಹರಿಸಬಹುದು. ದೇಶ ಭಾಷೆಗಳ ಗಡಿಯ ಮೀರುವ ಸಮನ್ವಯತೆ ಸಂದೇಶ ಸಾರುವ ಹಕ್ಕಿಯನ್ನವರು ಕಾಣುತ್ತಿದ್ದಾರೆ. ನಗರೀಕರಣದಿಂದ ಗಿಡಮರಗಳ ರುಂಡ ಮುಂಡಗಳು ಬೇರ್ಪಡುತ್ತಿರುವ ರುದ್ರ–ರಮಣೀಯ ಸನ್ನಿವೇಶವನ್ನು 'ನಾನೊಂದು ಆಲದ ಮರ' ಕವಿತೆ ಕಟ್ಟಿಕೊಡುತ್ತದೆ.

**ಅಚ್ಚರಿಯಂದರೆ ನನ್ನನ್ನು ಈವರೆಗೆ**
**ಯಾರು ಮುಟ್ಟಲೇ ಇಲ್ಲ**
**ಏಕೆಂದರೆ ನಾನೊಂದು ಆಲದಮರ**
**ಮೈತುಂಬ ಬೇರು ಬಿಳಲುಗಳು**

ಹೀಗೆ ವಿಸ್ತಾರಗೊಂಡ, ಸಂಕೀರ್ಣಗೊಂಡ ವ್ಯವಸ್ಥೆ ಮಾತ್ರ ಅಪಾಯಗಳನ್ನು ಎದುರಿಸಬಲ್ಲದು. ಇದು ವ್ಯಷ್ಟಿಗೂ ಸಮಷ್ಟಿಗೂ ಏಕಕಾಲದಲ್ಲಿಯೇ ಅನ್ವಯವಾಗುವ ಕವಿತೆ. ಕೊಚ್ಚಿ ಕೊಲ್ಲುವವರೆಗೂ ಭರವಸೆಯನ್ನದು ನೀಡುತ್ತದೆ. ಕೊಚ್ಚಿ ಕೊಲ್ಲುವ ಮೂರ್ಖತನ ಬೇಡವೆನ್ನುವುದು ಕವನದ ಆಶಯವಾಗಿರುವಂತಿದೆ.

ಕಾವ್ಯದಲ್ಲಿ ವ್ಯಂಜಕತೆ ಇಲ್ಲದಿದ್ದರೆ ಕವಿಲೋಕ ವ್ಯಾಪಾರದಿಂದ ದೂರವಿದ್ದಂತೆ. 'ಆಶಾಢಭೂತಿಗಳು', 'ಆಚಾರ ಅನುಸರಣೆ', 'ಫಲಾನುಭವಿಗಳು ನಾವು', 'ನಗು' ಮುಂತಾದ ಕವನಗಳು ವ್ಯಂಗದ ದಾಟಿಯಲ್ಲಿದ್ದು ಲೋಕದ ಹಾಗೂ ಮನೋಲೋಕದ ಸ್ವಾರ್ಥ, ಸೋಗಲಾಡಿತನವನ್ನು ಬಿಚ್ಚಿಡುತ್ತವೆ.

**ನಾಸ್ತಿಕರೆಂದು ಊರೆಲ್ಲ ಹೇಳಿ**
**ದೇವರ ಜರಿದು, ಹೋಮವ ಹಳಿದು**
**ಗುಟ್ಟಾಗಿ ಗುಡಿಯನು ಸುತ್ತುವ**
**ಘನ–ಆಷಾಢಭೂತಿಗಳು**

**ತಮ್ಮ ಮಕ್ಕಳನು ಬೆಚ್ಚಗೆ ಇರಿಸಿ**
**ಸಲ್ಲದ ಚಳುವಳಿ ಸೇರಿರಿ ಎನ್ನುತ**
**ಕಂಡವರ ಮಕ್ಕಳ ಬಾವಿಗೆ ನೂಕುವ**
**ಬುದ್ಧಿವಂತ ಆಷಾಢಭೂತಿಗಳು**

ಹೀಗೆ ಆಸ್ತಿಕ, ಸಾಕ್ಷರ, ಕೋಮುವಾದಿಯಲ್ಲ ಎಂದು ಬಿಂಬಿಸುವ ಆಶಾಢಭೂತಿಗಳನ್ನು ಉಲ್ಲೇಖಿಸಲಾಗಿದೆ. ಪ್ರತಿ ಪಾದದ ನಾಲ್ಕನೇ ಸಾಲು

ಬೇರೆ ಬೇರೆ ವರ್ಗದ ಆಶಾಢಭೂತಿಗಳ ಹೆಸರನ್ನು ಒಳಗೊಂಡಿದ್ದು ಕವನದ ಸೌಂದರ್ಯವನ್ನು ಹೆಚ್ಚಿಸಿದೆ. ಇದೇ ಧೋರಣೆ ಮೌಲ್ಯಗಳ ಅನುಸರಣೆಯಲ್ಲಿನ ನಾಟಕೀಯತೆಯನ್ನು ಹೇಳುವಾಗ ಮುಂದುವರೆದಿದೆ.

**'ಬುದ್ಧ'ನೆನ್ನುವರು**
**ಅಹಿಂಸೆಗೆ ಬದ್ಧವಿರಲಾರರು**
**'ಬಸವ'ನೆನ್ನುವರು**
**ಮೌಢ್ಯಗಳ ತೊರೆಯಲೊಲ್ಲರು**
**'ಗಾಂಧಿ'ಎನ್ನುವರು**
**ಬದುಕಿನ ಗಂಧ ಅರಿಯಲೊಲ್ಲರು**

ಹೀಗೆ ಮಹಾನ್ ವ್ಯಕ್ತಿಗಳ ಮುಖಸ್ತುತಿ ಮಾಡುವವರು ವಿಚಾರ ಅನುಸರಣೆಯಲ್ಲಿ ಸೋಲುವ ವ್ಯಂಗ್ಯ 'ಆಚಾರ ಅನುಸರಣೆ' ಕವನದಲ್ಲಿ ಕಾಣುತ್ತದೆ. ಉದ್ಯೋಗ ಸೇರುವವರೆಗೆ ಸೇವಾಭಾವ ಹೊಂದಿದ್ದು, ನಂತರ ಸಂಬಳ, ಬಡ್ತಿ ಲೆಕ್ಕಾಚಾರದಲ್ಲಿ ಕಳೆದುಹೋಗುವ ದುರಂತವನ್ನು 'ಫಲಾನುಭವಿಗಳು ನಾವು' ಎಂಬ ಕವಿತೆ ತೆರೆದಿಡುತ್ತದೆ.

ಈ ಕವಿಗೆ ಜೀವನ ಪ್ರೀತಿ ಆಳವಾಗಿರುವುದಕ್ಕೆ ಸಂಬಂಧಗಳೊಂದಿಗಿನ ಸಾಮರಸ್ಯವೇ ಕಾರಣವಿರಬಹುದೇ!? ಎನ್ನುವಷ್ಟು ಸಂಬಂಧಗಳ ಕುರಿತಾದ ಕವಿತೆಗಳಿವೆ. 'ಅಪ್ಪ', 'ಹೆತ್ತವಳು', 'ಅಮ್ಮ', 'ಮಗನೆಂಬ ಮಿತ್ರ', 'ಮಗಳು', 'ಕುಟುಂಬ', 'ಹೆಣ್ಣು', 'ಸಹೋದರರ ದಿನ', 'ಶರಣು ಶಿಕ್ಷಕ' ಹೀಗೆ ಇವರ ಲೇಖನಿಯಲ್ಲಿ ಸಾಲು ಸಾಲು ಸಂಬಂಧಗಳು ನಿಕಷಕ್ಕೊಳಗಾಗಿವೆ.

**"ನನ್ನನ್ನು ಹೆತ್ತವಳು ಮಹಾಜಿಪುಣೆ**
**ಕಾರಣ ಸರಳ, ಸಂಸಾರದ ಹೊಣೆ."**

**"ಕಾಯಿಲೆಗೆ ಕಾಸು ಖರ್ಚಾಗುವುದೆಂದು,**
**ಕಾದು ಕಾದು ಕೊನೆಗೆ ಆಸ್ಪತ್ರೆಗೆ ಬಂದು,**
**ಕಾಯಿಲೆ ಇದೆ ಎಂದ ವೈದ್ಯರನೆ ಜರಿದು,**
**ಆರೋಗ್ಯಕೆ ತಾನೇ ಉದಾಹರಣೆ ಎಂದು,**
**ನಮ್ಮೆಲ್ಲರನ್ನೂ ಮರುಳು ಮಾಡಿದವಳು."**

'ಹೆತ್ತವಳು' ಕವಿತೆಯ ಈ ಬಡ–ಮಧ್ಯಮವರ್ಗದ ತಾಯಿ ಲಂಕೇಶರ 'ಅವ್ವ'ನನ್ನು ನೆನಪಿಸುತ್ತಾಳೆ. ಮಗ, ಮಗಳನ್ನು ಕುರಿತು ಬರೆಯುವಾಗಲೂ ಕಾವ್ಯ ಗುಣಕ್ಕಿಂತ ಜೀವನ ಪ್ರೀತಿ ದಟ್ಟವಾಗಿ ಕಾಣುತ್ತದೆ.

ಕೆಲವು ಕವಿತೆಗಳು ಜಿಜ್ಞಾಸೆಯ ಮೂಸೆಯಲ್ಲೂ ಮುಳುಗೇಳುತ್ತವೆ. 'ನಿಂದಕ–ರಿರಬೇಕು', 'ನಂಬಿಕೆ ಪ್ರಶ್ನೆ', 'ಸದ್ದಿಲ್ಲದ ಯುದ್ಧ', 'ದೃಷ್ಟಿ ಸೃಷ್ಟಿ', 'ಎಡಬಲಗಳ ನಡುವೆ', 'ಹೆಸರು ಉಸಿರು', 'ಮನದ ಮಾತು', 'ನಾನು ಎಂಬುದೇನು' ಹೀಗೆ ಕವಿಯನ್ನೇ ದ್ವಂದ್ವಕ್ಕೀಡುಮಾಡಿದ ಅಂಶಗಳು ಈ ಕವಿತೆಗಳಲ್ಲಿ ಒಡಮೂಡಿವೆ.

**"ನಿಂದನೆಗಳೂ... ಇರಬೇಕು!**
**'ಶ್ರೇಷ್ಠತೆ'ಯ ಸೊಕ್ಕಡಗಲು!**
**'ಸತ್ಯ'ದ ದರ್ಶನವಾಗಲು!"** .
**"ಹೊಗಳಿಕೆಗೆ ಅಟ್ಟಕ್ಕೇರಿದರೆ!**
**ಕೆಳಗೆ ಬಿದ್ದಾಗ ನಗದಿರುವರೆ?**
**ಕಾಲೆಳೆದವರೂ ಕದಲದಿರಲಿ,"**
**"ಕಾಲಮೇಲೆ ನಿಂತಿದ್ದ ಕಾಣಲು!**
**ನಿಂದಿಸಿದವರೂ ನಡೆಯುತಿರಲಿ,**
**ಸ್ತುತಿಸುವ ನಿಜವ ಆಲಿಸಲು!"**

ಪ್ರತಿರೋಧವಿಲ್ಲದ ತಾಳಿಕೆಯ ಈ ಗುಣ ಮಾತ್ರ ವಿಶ್ವ ಬಂಧುತ್ವವನ್ನು ಬೆಸೆಯಬಹುದಲ್ಲವೇ?! ಧಾರ್ಮಿಕ–ಸಾಮಾಜಿಕ ಆಚರಣೆಯೊಂದು ರಾಜಕೀಯ ಕುತಂತ್ರಕ್ಕೋ, ಧರ್ಮದ ಅಮಲಿಗೋ ಬಲಿಯಾಗುವ ಮುಗ್ಧ ಬದುಕಿನ ಚಿತ್ರಣ 'ನಾವು ಕಲಿಯಬೇಕು', 'ಶಾಲೆಗೆ ಕಳಿಸಮ್ಮ' ಕವನಗಳಲ್ಲಿ ಕೆತ್ತಲ್ಪಟ್ಟಿವೆ.

**ಒಪ್ಪಿದೆವು, ಸಮವಸ್ತ್ರದ ಆಶಯಗಳ.**
**ಆದರೆ ನಮ್ಮಿಷ್ಟ ಕಷ್ಟ ಕೇಳುವವರಾರು?**
**ಇವುನಮಗಿಟ್ಟ ಉಡುಗೆ–ತೊಡುಗೆಗಳು**
**ಬಿಟ್ಟರೆ 'ಕಲಿಕೆ ಕನಸುಗಳು' ಕಮರುವವು**

**ಬಣ್ಣಗೆಡುವ ಬಟ್ಟೆಗಳ ಕಥೆಗಿಂತ**
**ಬಟ್ಟೆಗೆಟ್ಟವರಿಗೆ ಧಿಕ್ಕಾಗಿ ನಿಲ್ಲುವೆವು.**
**ಬಗೆಬಗೆಯದಿರಿಸುಗಳ ಧರಿಸುವ**
**ಜಗದಿ ಸಮರಸದ ಬಣ್ಣಗಳಾಗುವೆವು**

ಕವಿಯಲ್ಲೊಂದು ತಾಯ್ತನವೂ ಮೈದುಂಬಿಕೊಂಡಾಗ ಇಂತಹ ಸಂವೇದನಾಶೀಲ ರಚನೆಗಳು ಬರುತ್ತವೆ. ವಿಮರ್ಶಕ ಡಾ. ಎಚ್. ಎಸ್. ರಾಘವೇಂದ್ರರಾವ್ ಅವರು 'ಕಣ್ಣ ಹನಿಗಳ ಕಾಣಿಕೆ' ಎಂಬ ವಿಮರ್ಶಾ ಪುಸ್ತಕದಲ್ಲಿ ದಾಖಲಿಸಿರುವಂತೆ "ಹೆಣ್ತನದ ನಸುಲೇಪ ಇಲ್ಲದವನು ಸಾಹಿತಿಯಾಗಲು ಸಾಧ್ಯವೇ ಇಲ್ಲ. ಹಾಗೆಯೇ ಇದು ಎಲ್ಲ ಹೆಂಗಸರು ರೂಪಿಸುವ ತಾತ್ವಿಕತೆಯಲ್ಲಿ

ಬೇರೆ ಯಾರದೇ ದನಿಯನ್ನು ಮೂಕವಾಗಿಸುವ ಪ್ರಯತ್ನ ಇರುವುದಿಲ್ಲ. ಗಂಡು ಮತ್ತು ಹೆಣ್ಣುಗಳನ್ನು ಪರಸ್ಪರ ಸೇಡು ತೀರಿಸಿಕೊಳ್ಳಲು ಸದಾ ಸನ್ನದ್ಧರಾಗಿರುವ ಶತ್ರುಗಳೆಂದು ತಿಳಿಯುವುದು ಅಗತ್ಯವಿಲ್ಲ ಅಂತಹ ಅಜೆಂಡಾವನ್ನು ಹೊಂದಿರುವ ಬರವಣಿಗೆಯು ಬರವಣಿಗೆಯೇ ಅಲ್ಲ"

**"ಹೆಣ್ಣು ಮಾಯೆ ಅಲ್ಲ**
**ಸಂಸಾರದ ಕಣ್ಣು"**

**"ಬರೀ ಸಹನಾಮೂರ್ತಿಯಲ್ಲ**
**ಅಸಹನೆಗಳ ಅಗ್ನಿಕುಂಡ"**

**"ಇವಳು ಆಸೆಗಳ ಸರಕಲ್ಲ**
**ಇವಳಿಲ್ಲದೆ ಜಗವಿಲ್ಲ"**

ಹೀಗೆ ಗಂಡಾಳ್ತನದ ಪಿತೃ ಸಂಸ್ಕೃತಿಯ ಲಿಂಗ ಬೇಧದಿಂದ ಹೆಣ್ಣನ್ನು ಎರಡನೇ ದರ್ಜೆಯ ಜೀವಿಯಾಗಿಸುವ ಕುರಿತು ಈ ಕವಿಗೆ ಧಿಕ್ಕಾರದ ಮನೋಭಾವವಿದೆ. ಇದು ತನ್ನ ಸಹಜೀವಿಯ ಬಗ್ಗೆ ಇರಬೇಕಾದ ಕಾಳಜಿ, ಕಕ್ಕುಲತೆ ಕೂಡ!

ಒಟ್ಟಾರೆಯಾಗಿ ಚೊಚ್ಚಲ ಕವನ ಸಂಕಲನವಾದರೂ ವಿಸ್ತಾರವಾದ ಲೋಕಾನುಭವ, ತೀಕ್ಷ್ಣವಾದ ಕಾವ್ಯ ಕುತೂಹಲ ಈ ಕವಿಗಿರುವುದು ಅವರ ವೈವಿಧ್ಯಮಯ ವಸ್ತು ವಿಷಯಗಳ ಕವನಗಳಿಂದ ಖಚಿತವಾಗುತ್ತದೆ. ವಾಚ್ಯವನ್ನು ಮಿತಗೊಳಿಸಿ, ಧ್ವನಿಯನ್ನು ಧ್ಯಾನಿಸಿ ಮುಂದುವರಿದರಾದರೆ ಕನ್ನಡ ಕಾವ್ಯಲೋಕಕ್ಕೊಬ್ಬ ಸಂವೇದನಾಶೀಲ ಕವಿ ಸಿಗುತ್ತಾನೆ.

**ಪರಾಮರ್ಶನ ಗ್ರಂಥಗಳು:**


1. ಮಾನವಿಯತೆಯ ಮಾತು (2023), ಪಾಲಕ್ಷಪ್ಪ ಎಸ್. ಎನ್., ಅಂತರಂಗನ ಪ್ರಕಾಶನ, ಸಾಗರ.
2. ಕಣ್ಣಹನಿಗಳೆ ಕಾಣಕೆ (2012), ರಾಘವೇಂದ್ರ ರಾವ್ ಹೆಚ್. ಎಸ್., ಇಳ ಪ್ರಕಾಶನ, ಬೆಂಗಳೂರು.